# ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು.


**ಕೊಠಡಿ ಸಂಖ್ಯೆ:13  ಜಿಲ್ಲಾಧಿಕಾರಿಗಳ ಕಟ್ಟಡ**

**ದೂರವಾಣಿ ಸಂಖ್ಯೆ: 2427140**

websiteITDPMysore@yahoo.com


## ✱ ಸಾಮಾನ್ಯ ವಿವರ

ಮೈಸೂರು ಜಿಲ್ಲೆಯಲ್ಲಿ 2001 ರ ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ 2661027 ಲಕ್ಷ ಇದ್ದು, ಈ ಪೈಕಿ 271291 ಲಕ್ಷ ಪರಿಶಿಷ್ಟ ವರ್ಗದ ಜನಾಂಗಗಳಿಗೆ ಸೇರಿದವರಾಗಿರುತ್ತಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ವರ್ಗದ ಜನಸಂಖ್ಯೆ ವರ್ಗದ ಶೇಕಡ 10.19 ಇರುತ್ತದೆ.

## ✱ ಜನಸಂಖ್ಯೆ

ಜಿಲ್ಲೆಯಲ್ಲಿ ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಹುಣಸೂರು, ಮತ್ತು ನಂಜನಗೂಡು ತಾಲ್ಲೂಕು ವ್ಯಾಪ್ತಿಗಳಲ್ಲಿ ಬುಡಕಟ್ಟು ಮೂಲನಿವಾಸಿ ಗಿರಿಜನರು ಹೆಚ್ಚಾಗಿ ವಾಸಿಸುತ್ತಿದ್ದು, ಒಟ್ಟು 203 ಹಾಡಿಗಳಲ್ಲಿ 8472 ಕುಟುಂಬಗಳಿದ್ದು, ಮೂಲನಿವಾಸಿಗಳ ಜನಸಂಖ್ಯೆ 31529 ಇರುತ್ತದೆ. ಈ ಕೆಳಕಂಡಂತೆ ಜಿಲ್ಲೆಯಲ್ಲಿ ಮೂಲನಿವಾಸಿಗಳು ಇರುತ್ತಾರೆ.

| ತಾಲ್ಲೂಕಿನ ಹೆಸರು | ಒಟ್ಟು ಜನ ಸಂಖ್ಯೆ | ಪರಿಶಿಷ್ಟ ವರ್ಗಗಳ ಜನ ಸಂಖ್ಯೆ | ಶೇಕಡ | ಮೂಲನಿವಾಸಿಗಳ ಜನ ಸಂಖ್ಯೆ ವಿವರ | | | | | | | | | | |
|---|---|---|---|---|---|---|---|---|---|---|---|---|---|---|
| | | | | ಇತರೆ ಪರಿಶಿಷ್ಠ ವರ್ಗ | ಮೂಲ ನಿವಾಸಿಗಳು | ಶೇಕಡ | ಕಾಲೋನಿಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಜೇನು ಕುರುಬ | ಕಾಡು ಕುರುಬ | ಯರವ | ಹಕ್ಕಿ ಪಿಕ್ಕಿ | ಡ್ರೋಂಗ್ರಿ ಗರಾಸಿಯ | ಸೋಲಿಗ |
| ಹೆಚ್.ಡಿ.ಕೋಟೆ | 245930 | 51482 | 20.93 | 35615 | 15867 | 30.82 | 113 | 4433 | 10952 | 1667 | 1573 | 407 | – | 1268 |
| ಹುಣಸೂರು | 253926 | 39239 | 15.45 | 28854 | 10385 | 26.47 | 52 | 2651 | 5013 | 535 | 143 | 1378 | 1787 | 1529 |
| ಮೈಸೂರು. | 1038490 | 62702 | 6.04 | 62416 | 286 | 0.42 | 01 | 72 | 0 | 0 | 0 | 0 | 0 | 286 |
| ನಂಜನಗೂಡು | 380223 | 47550 | 12.51 | 46652 | 898 | 1.89 | 05 | 225 | 472 | 275 | 0 | 0 | 0 | 151 |
| ಪಿರಿಯಾಪಟ್ಟಣ | 224254 | 17270 | 7.70 | 13177 | 4093 | 23.70 | 32 | 1091 | 2809 | 149 | 971 | 0 | 164 | 0 |
| ಟಿ.ನರಸೀಪುರ | 279005 | 37448 | 13.42 | 37448 | 0 | 0 | 0 | 0 | 0 | 0 | 0 | 0 | 0 | 0 |
| ಕೆ.ಆರ್.ನಗರ | 239199 | 15600 | 6.52 | 15600 | 0 | 0 | 0 | 0 | 0 | 0 | 0 | 0 | 0 | 0 |
| **ಒಟ್ಟು** | **2661027** | **271291** | **10.19** | **239762** | **31529** | *11.62* | **203** | **8472** | **19246** | **2626** | **2687** | **1785** | **1951** | **3234** |

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ವರ್ಗದ ಜನಾಂಗದವರ ಕಲ್ಯಾಣಕ್ಕಾಗಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2008-09 ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ಯೋಜನೆಯಲ್ಲಿ ರೂ. 725.72 ಲಕ್ಷ, ಯೋಜನೇತರದಲ್ಲಿ ರೂ. 448.93 ಲಕ್ಷ, ಹಾಗೂ ಗಿರಿಜನ ಉಪಯೋಜನೆಯಡಿ ರೂ. 212.58 ಲಕ್ಷಗಳು ನಿಗದಿಗೊಳಿಸಲಾಗಿದೆ.

## ✱ ಸಾಕ್ಷರತಾ ಮಟ್ಟ

2001 ರ ಜನಗಣತಿ ಪ್ರಕಾರ ಜಿಲ್ಲೆಯ ಸಾಮಾನ್ಯ ಸಾಕ್ಷರತಾ ಮಟ್ಟ 68.03 ಆಗಿರುತ್ತದೆ. ಇದರಲ್ಲಿ ಪರಿಶಿಷ್ಟ ವರ್ಗದವರ ಸಾಕ್ಷರತ ಮಟ್ಟ ಶೇ 46.40 ಇದ್ದು, ಶೇ 37.50 ಮಹಿಳೆಯರು ಮತ್ತು ಶೇ 55.10 ಪುರುಷರದ್ದಾಗಿರುತ್ತದೆ.

## ✱ ಆಡಳಿತ ವ್ಯವಸ್ಥೆ

ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳ ಉಸ್ತುವಾರಿಗೆ ಜಿಲ್ಲಾ ಮಟ್ಟದಲ್ಲಿ ಯೋಜನಾ ಸಮನ್ವಯಾಧಿಕಾರಿಗಳು ಮುಖ್ಯಸ್ಥರಾಗಿದ್ದು, ಇವರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ಕಛೇರಿಯಲ್ಲಿ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತವೆ.

| ಕ್ರ.ಸಂ | ಹುದ್ದೆಗಳ ವಿವರ | ಮಂಜೂರಾತಿ ಸಂಖ್ಯೆ |
|---|---|---|
| 1 | ಯೋಜನಾ ಸಮನ್ವಯಾಧಿಕಾರಿಗಳು | 01 |
| 2 | ಕಛೇರಿ ಅಧೀಕ್ಷಕರು | 01 |
| 3 | ಪ್ರಥಮ ದರ್ಜೆ ಸಹಾಯಕರು | 03 |
| 4 | ದ್ವಿತೀಯ ದರ್ಜೆ ಸಹಾಯಕರು | 01 |
| 5 | ಬೆರಳಚ್ಚುಗಾರರು | 01 |
| 6 | ವಾಹನ ಚಾಲಕರು | 01 |
| 7 | ಡಿ ಗ್ರೂಪ್ ನೌಕರರು | 02 |

ಇದಲ್ಲದೆ ಜೇನು ಕುರುಬರ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಜೇನುಕುರುಬರ ವಿಶೇಷ ಕರ್ತವ್ಯಾಧಿಕಾರಿಗಳ ಕಛೇರಿಯಿದ್ದು ಈ ಕಛೇರಿಯು ಹುಣಸೂರಿನಲ್ಲಿ ಸ್ಥಾಪಿತವಾಗಿದೆ. ಈ ಕಛೇರಿಯಲ್ಲಿ ಜೇನುಕುರುಬರ ವಿಶೇಷ ಕರ್ತವ್ಯಾಧಿಕಾರಿಗಳು ಮುಖ್ಯಸ್ಥರಾಗಿದ್ದು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಗಿರಿಜನ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುತ್ತಾರೆ. ಹುಣಸೂರು ಮತ್ತು ಹೆಚ್.ಡಿ.ಕೋಟೆ ತಾಲ್ಲೂಕುಗಳಲ್ಲಿ ಎರಡು ಗಿರಿಜನ ಕಲ್ಯಾಣ ವಿಸ್ತರಣಾಧಿಕಾರಿಗಳು ಇದ್ದು, ಇವರು ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳೊಂದಿಗೆ ಸಹಕರಿಸುತ್ತಿದ್ದಾರೆ.

## * ಶೈಕ್ಷಣಿಕ ಕಾರ್ಯಕ್ರಮ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ವರ್ಗಗಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಹಾಗೂ ಆ ವರ್ಗದ ಜನಾಂಗದವರಲ್ಲಿ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜಿಲ್ಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ವಿದ್ಯಾ ಸಂಸ್ಥೆಗಳು ನಡೆಯುತ್ತಿರುತ್ತವೆ.

| ಕ್ರ. ಸಂ | ತಾಲ್ಲೂಕಿನ ಹೆಸರು | ಅಶ್ರಮಶಾಲೆಗಳು | | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | | ಮೊರಾರ್ಜಿ ವಸತಿ ಶಾಲೆಗಳು/ ಶೈಕ್ಷಣಿಕ ಸಂಕೀರ್ಣ ಶಾಲೆ | | ಮಹಿಳಾ ಕಲ್ಯಾಣ ಕೇಂದ್ರಗಳು | |
|---|---|---|---|---|---|---|---|---|---|---|---|
| | | ಸಂಖ್ಯೆ | ಮಕ್ಕಳ ಸಂಖ್ಯೆ | ಸಂಖ್ಯೆ | ಮಕ್ಕಳ ಸಂಖ್ಯೆ | ಸಂಖ್ಯೆ | ಮಕ್ಕಳ ಸಂಖ್ಯೆ | ಸಂಖ್ಯೆ | ಮಕ್ಕಳ ಸಂಖ್ಯೆ | ಸಂಖ್ಯೆ | ಮಕ್ಕಳ ಸಂಖ್ಯೆ |
| 1 | ನಂಜನಗೂಡು | 03 | 425 | – | – | – | – | – | – | – | – |
| 2 | ಹೆಚ್.ಡಿ.ಕೋಟೆ | 09 | 1375 | 06 | 342 | 01 | 50 | 1 | 125 | 1 | 50 |
| 3 | ಹುಣಸೂರು | 05 | 725 | 03 | 150 | - | - | 1 | 100 | 3 | 150 |
| 4 | ಪಿರಿಯಾಪಟ್ಟಣ | 03 | 475 | 04 | 175 | - | - | 1 | 100 | 1 | 50 |
| 5 | ಕೆ.ಆರ್.ನಗರ | – | – | 01 | 25 | - | - | - | - | 1 | 50 |
| 6 | ಮೈಸೂರು | – | – | – | – | 01 | 50 | - | - | – | – |
| 7 | ತಿ.ನರಸೀಪುರ | – | – | 01 | 50 | – | – | - | - | – | – |
| | **ಒಟ್ಟು** | **20** | **3000** | **10** | **742** | **02** | **100** | **03** | **325** | **06** | **300** |

**✱ ಆಶ್ರಮಶಾಲೆಗಳು**

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮಶಾಲೆಗಳನ್ನು ನಡೆಸಲಾಗುತ್ತಿದೆ. ಈ ಆಶ್ರಮಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟ, ಸಮವಸ್ತ್ರ, ಪಠ್ಯ ಪುಸ್ತಕ, ಲೇಖನಾ ಸಾಮಗ್ರಿ, ಇತ್ಯಾದಿ ಅನೇಕ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿ 21 ಆಶ್ರಮ ಶಾಲೆಗಳಿದ್ದು, ಒಟ್ಟು 3150 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**✱ ದೊರೆಯುವ ಸೌಲಭ್ಯಗಳು**

ಈ ಆಶ್ರಮಶಾಲೆಗಳಲ್ಲಿ ಮಕ್ಕಳಿಗೆ 1 ರಿಂದ 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಲು ಅವಕಾಶವಿದೆ. ಇಲ್ಲಿನ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಬೋಜನಾ ವೆಚ್ಚಕ್ಕಾಗಿ ರೂ. 350–00, ಇತರೆ ವೆಚ್ಚಕ್ಕಾಗಿ ರೂ. 25–00 ಹಾಗೂ ಪಠ್ಯ ಪುಸ್ತಕ ಲೇಖನಿ ಸಾಮಗ್ರಿಗಳಿಗೆ ರೂ. 40–00 ಮತ್ತು ಶಾಲಾ ಸಮವಸ್ತ್ರಗಳಿಗೆ ರೂ. 200–00 ಗಳನ್ನು ನೀಡಲಾಗುತ್ತಿದೆ.

**✱ ಅರ್ಹತೆ**

ಗ್ರಾಮಾಂತರ ಪ್ರದೇಶದ ಸುತ್ತಮುತ್ತಲಿನ ಪರಿಶಿಷ್ಟ ವರ್ಗಗಳ ಮಕ್ಕಳು ಈ ಕೇಂದ್ರಕ್ಕೆ ಸೇರಬಹುದು. ಮಕ್ಕಳ ವಯೋಮಿತಿ 5 ವರ್ಷದ ಒಳಗೆ ಇರಬೇಕು.

**✱ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ**

ಗ್ರಾಮಾಂತರ ಪ್ರದೇಶಗಳಲ್ಲಿ 5 ರಿಂದ 10 ನೇ ತರಗತಿಯಲ್ಲಿ ವ್ಯಾಸಾಂಗ ಮಾಡುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲು ಬಾಲಕ ಬಾಲಕಿಯರಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ 19 ವಿದ್ಯಾರ್ಥಿ ನಿಲಯಗಳಿದ್ದು, ಇವುಗಳಲ್ಲಿ 992 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**✱ ದೊರೆಯುವ ಸೌಲಭ್ಯಗಳು**

ಈ ವಿದ್ಯಾರ್ಥಿನಿಲಯುಗಳಲ್ಲಿ 5 ರಿಂದ 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಅವಕಾಶವಿದೆ. ಇಲ್ಲಿನ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಬೋಜನಾ ವೆಚ್ಚಕ್ಕಾಗಿ ರೂ. 600–00, ಇತರೆ ವೆಚ್ಚಕ್ಕಾಗಿ ರೂ. 40–00 ಹಾಗೂ ಪಠ್ಯ ಪುಸ್ತಕ ಲೇಖನಿ ಸಾಮಗ್ರಿಗಳಿಗೆ ರೂ. 100–00 ಮತ್ತು ಶಾಲಾ ಸಮವಸ್ತ್ರಗಳಿಗೆ ರೂ. 450–00 ಗಳನ್ನು ನೀಡಲಾಗುತ್ತಿದೆ.

**✱ ಅರ್ಹತೆ**

ಗ್ರಾಮಾಂತರ ಪ್ರದೇಶಗಳಲ್ಲಿ 5 ನೇ ತರಗತಿಯಿಂದ 10 ನೇ ತರಗತಿ ವರೆಗೆ ವ್ಯಾಸಾಂಗ ಮಾಡುತ್ತಿರುವ ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಾಗಿರಬೇಕು. ನಿಗದಿತ ಅರ್ಜಿ ನಮೂನೆಗಳನ್ನು ಸೇರಬಯುಸುವ ನಿಲಯಗಳಿಂದ ಅಥವಾ ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿಂದ ಪಡೆಯಬಹುದಾಗಿರುತ್ತದೆ. ಅಭ್ಯರ್ಥಿಗಳನ್ನು ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯಲ್ಲಿ ಅರ್ಹತೆ ಮೇಲೆ ಆಯ್ಕೆ ಮಾಡಲಾಗುವುದು.

**✱ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯ**

ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲು ಬಾಲಕ / ಬಾಲಕಿಯರಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ 02 ವಿದ್ಯಾರ್ಥಿ ನಿಲಯಗಳಿದ್ದು, ಇವುಗಳಲ್ಲಿ 138 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**✱ ದೊರೆಯುವ ಸೌಲಭ್ಯಗಳು**

ಈ ವಿದ್ಯಾರ್ಥಿನಿಲಯಗಳಿಗೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅವಕಾಶವಿದೆ. ಇಲ್ಲಿನ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಭೋಜನಾ ವೆಚ್ಚಕ್ಕಾಗಿ ರೂ. 600-00, ಇತರೆ ವೆಚ್ಚಕ್ಕಾಗಿ ರೂ. 40-00 ಗಳನ್ನು ನೀಡಲಾಗುತ್ತಿದೆ.

**✱ ಅರ್ಹತೆ**

ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಾಗಿರಬೇಕು. ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರಬೇಕು. ನಿಗದಿತ ಅರ್ಜಿ ನಮೂನೆಗಳನ್ನು ಸೇರಬಯಸುವ ನಿಲಯಗಳಿಂದ ಅಥವಾ ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿಂದ ಪಡೆಯಬಹುದಾಗಿರುತ್ತದೆ. ಅಭ್ಯರ್ಥಿಗಳನ್ನು ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯಲ್ಲಿ ಅರ್ಹತೆ ಮೇಲೆ ಆಯ್ಕೆ ಮಾಡಲಾಗುವುದು.

## ✱ ವಿದ್ಯಾರ್ಥಿ ವೇತನಗಳುಃ-

**✱ 1 ರಿಂದ 4ನೇ ತರಗತಿ ವಿದ್ಯಾರ್ಥಿವೇತನ**

ಕರ್ನಾಟಕ ಸರ್ಕಾರ 1995-96 ನೇ ಸಾಲಿನಿಂದ 1ರಿಂದ 5ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಮಧ್ಯದಲ್ಲಿ ಶಾಲೆ ಬಿಡುವುದನ್ನು ತಡೆಗಟ್ಟು ಮತ್ತು ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸುವ ಸಲುವಾಗಿ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ. 75-00 ರಂತೆ ವಿದ್ಯಾರ್ಥಿ ವೇತನ ನೀಡುವ ಯೋಜನೆ ಜಾರಿಗೊಳಿಸಿದೆ. 1 ರಿಂದ 5 ನೇ ತರಗತಿವರೆಗೆ ವ್ಯಾಸಾಂಗ ಮಾಡುತ್ತಿರುವ ಎಲ್ಲಾ ಪರಿಶಿಷ್ಟ ವರ್ಗದ ಬಾಲಕ / ಬಾಲಕಿಯರು ಈ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಯಾವುದೆ ಆದಾಯ ಮಿತಿ ಇರುವುದಿಲ್ಲ.

**✱ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ**

ಸರ್ಕಾರಿ ಅಥವಾ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಸೌಲಭ್ಯ ಪಡೆಯದ ಪರಿಶಿಷ್ಟ ವರ್ಗಕ್ಕೆ ಸೇರಿದ ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

**✱ ಅರ್ಹತೆ**

**6** ನೇ ತರಗತಿಯಿಂದ 10 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುತ್ತಾರೆ. ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಿದಾಗ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಿ ಮಂಜೂರಾತಿ ಪಡೆಯಬೇಕು.

## ✱ ವಿದ್ಯಾರ್ಥಿವೇತನದ ಮೊತ್ತ

1. 5 ರಿಂದ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 75-00 ಗಳು
2. 8ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 100-00 ಗಳು
3. 8ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ವಾರ್ಷಿಕ ರೂ. 100-00 ಗಳು

**✱ ಪ್ರತಿಭಾ ವಿದ್ಯಾರ್ಥಿವೇತನ**

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುವಂತೆ ಪ್ರೋತ್ಸಾಹಿಸಲು ಹಾಗೂ ಅವರಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವ ತುಂಬುವ ಉದ್ದೇಶದಿಂದ ಪ್ರತಿಭಾ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

## ✱ ಅರ್ಹತೆ

ವಿದ್ಯಾರ್ಥಿನಿಲಯದಲ್ಲಿ ವಾಸಿಸುವ, ವಾಸಿಸದ ಎಲ್ಲಾ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಇದಕ್ಕೆ ಅರ್ಹರಾಗಿರುತ್ತಾರೆ. ವಾರ್ಷಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ಪ್ರತಿಭಾ ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುತ್ತಾರೆ.

## ✱ ವಿದ್ಯಾರ್ಥಿವೇತನದ ಮೊತ್ತ

1. 5 ರಿಂದ 7ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 75–00 ಗಳು
2. 8ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 100–00 ಗಳು

## ✱ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

ಭಾರತ ಸರ್ಕಾರದ ನಿಬಂಧನೆಗಳ ಮೇರೆಗೆ ಕುಟುಂಬದ ವಾರ್ಷಿಕ ವರಮಾನ 1,00,000/– ರೂ.ಗಳಿಗೆ ಮೀರದ ಎಲ್ಲಾ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುತ್ತಾರೆ. ವಿದ್ಯಾರ್ಥಿವೇತನದ ಮೊತ್ತ ಬೇರೆ ಬೇರೆ ಕೋರ್ಸ್ ಬೇರೆ ಬೇರೆಯಾಗಿದಲ್ಲಿ ಕೋರ್ಸ್‌ವಾರು ವಿದ್ಯಾರ್ಥಿವೇತನದ ಮೊತ್ತದ ವಿವರ ಈ ಕೆಳಕಂಡಂತಿದೆ.

| ಗುಂಪು | ಕೋರ್ಸ್ | ವಿದ್ಯಾರ್ಥಿನಿಲಯ ವಾಸಿಗಳಲ್ಲದವರಿಗೆ ಮಾಹೆಯಾನ ರೂ.ಗಳು | ವಿದ್ಯಾರ್ಥಿನಿಲಯ ವಾಸಿಗಳಿಗೆ ಮಾಹೆಯಾನ ರೂ.ಗಳು |
|---|---|---|---|
| 1 | ಸ್ನಾತಕೋತ್ತರ ತಾಂತ್ರಿಕ, ಕೃಷಿ, ಪಶುವೈದ್ಯ ಪದವಿ ಇತರೆ | 330 | 740 |
| 2 | ವೃತ್ತಿಪರ ತಾಂತ್ರಿಕ, ಡಿಪ್ಲಮೋ, ಎಂ.ಫಿಲ್ | 330 | 510 |
| 3 | 1 ಮತ್ತು 2 ನ್ನು ಹೊರತು ಪಡಿಸಿ ಉಳಿದ ಇತರೆ ಪದವಿ | 185 | 355 |
| 4 | ಎಲ್ಲಾ ಪದವಿ ಪೂರ್ವ ಕೋರ್ಸ್‌ಗಳು | 140 | 235 |

## ✱ ಮಂಜೂರಾತಿ ವಿಧಾನ

ಈ ವಿದ್ಯಾರ್ಥಿವೇತನಕ್ಕೆ ಅರ್ಜಿಗಳನ್ನು ಎಲ್ಲಾ ಕಾಲೇಜುಗಳಲ್ಲೂ ನೀಡಲಾಗುತ್ತಿದೆ. ಇದನ್ನು ಭರ್ತಿಮಾಡಿ ಕಾಲೇಜು ಪ್ರಾಂಶುಪಾಲಕ ಮೂಲಕ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು. ವಿದ್ಯಾರ್ಥಿವೇತನ ಮಂಜೂರಾದ ನಂತರ ಮಂಜೂರಾತಿ ಪಟ್ಟಿಯನ್ನು ಚೆಕ್ ಸಮೇತ ಸಂಬಂಧ ಪಟ್ಟ ಕಾಲೇಜುಗಳಿಗೆ ಕಳುಹಿಸಿಕೊಡಲಾಗುತ್ತದೆ.

## ✱ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅನರ್ಹರಾದ ಮತ್ತು ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ.

## ✱ ಅರ್ಹತೆ

1. ವೈದ್ಯಕೀಯ ಹಾಗೂ ತಾಂತ್ರಿಕ ಪದವಿಗಳಲ್ಲಿ ಎರಡು ಬಾರಿ ಅನುತ್ತೀರ್ಣರಾದವರೂ ಸಹ ಇದಕ್ಕೆ ಅರ್ಹರಾಗಿರುತ್ತಾರೆ.
2. ಇತರೆ ಸಾಮಾನ್ಯ ಪದವಿಗಳಲ್ಲಿ ಒಂದು ಬಾರಿ ಅನುತ್ತೀರ್ಣರಾದವರೂ ಇದಕ್ಕೆ ಅರ್ಹರು.

3. ಒಂದೇ ಕುಟುಂಬದ ಇಬ್ಬರು ಮಕ್ಕಳು ವ್ಯಾಸಂಗ ಮಾಡುತ್ತಿದ್ದರೂ, ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರು.

**✱ ಮಂಜೂರಾತಿ ವಿಧಾನ**

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಕಾಲೇಜು ಪ್ರಾಂಶುಪಾಲಕ ಮೂಲಕ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು. ಅದನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಿ ಅದರ ಪಟ್ಟಿ ಹಾಗೂ ಚೆಕ್‌ಗಳನ್ನು ಸಂಬಂಧ ಪಟ್ಟ ಕಾಲೇಜುಗಳಿಗೆ ಕಳುಹಿಸಲಾಗುತ್ತದೆ.

**✱ ನಗದು ಬಹುಮಾನ**

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ತಿಗಳಿಗೆ ನಗದು ಬಹುಮಾನ ನೀಡಲಾಗುತ್ತದೆ.

**✱ ಬಹುಮಾನದ ವಿವರ**

| | | |
|---|---|---|
| 1 | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ | ರೂ. 500.00 |
| 2 | ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳೀಗೆ | ರೂ. 750.00 |
| 3 | ಪದವಿ ತರಗತಿ ವಿದ್ಯಾರ್ಥಿಗಳಿಗೆ | ರೂ. 1000.00 |
| 4 | ಸ್ನಾತಕಕೋತ್ತರ ಪದವಿ (ಎಂ.ಎ, ಎಂ.ಎಸ್ಸಿ, ಎಂ.ಕಾಂ) | ರೂ. 1250.00 |
| 5 | ತಾಂತ್ರಿಕ, ವೈದ್ಯಕೀಯ, ಕೃಷಿ ಪಶುವೈದ್ಯ ಪದವಿಗಳು | ರೂ. 1500.00 |

**✱ ಮಂಜೂರಾತಿ ವಿಧಾನ**

1. ಈ ನಗದು ಬಹುಮಾನಕ್ಕಾಗಿ ಅರ್ಜಿ ಕರೆಯಲಾಗುತ್ತದೆ.
2. ಸಂಸ್ಥೆಯ ಮುಖ್ಯಸ್ಥರ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಅಂಕ ಪಟ್ಟಿಯ ಜೆರಾಕ್ಸ್ ಪ್ರತಿಗಳೊಂದಿಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು. ಇದರೊಂದಿಗೆ ಜಾತಿ ಪ್ರಮಾಣ ಪತ್ರ ತಪ್ಪದೇ ಲಗತ್ತಿಸಬೇಕು.
3. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಅರ್ಜಿ ಪರಿಶೀಲಿಸಿ ಮಂಜೂರಾತಿ ನೀಡಿ ಸಂಬಂಧ ಪಟ್ಟ ವಿದ್ಯಾರ್ಥಿಗಳಿಗೆ ಬಹುಮಾನದ ಹಣದ ಚೆಕ್‌ನ್ನು ಕಳುಹಿಸುವರು.

**✱ ರ್‍ಯಾಂಕ್ ವಿದ್ಯಾರ್ಥಿಗಳಗೆ ನಗದು ಬಹುಮಾನ**

ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ ಮತ್ತು ಸಾರ್ವತ್ರಿಕ ಪರೀಕ್ಷೆಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಪಡೆದು ಉತ್ತೀರ್ಣರಾಗುವಂತೆ ಪ್ರೋತ್ಸಾಹಿಸಲು ಮೇಲ್ಕಂಡ ಪರೀಕ್ಷೆಗಳಲ್ಲಿ 1 ರಿಂದ 10 ರ್‍ಯಾಂಕ್ ಪಡೆದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯಲ್ಲಿ 1 ರಿಂದ 3 ನೇ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ರೂ. 5000.00 ಗಳ ಬಹುಮಾನ ನೀಡಲಾಗುತ್ತದೆ.

**✱ ಅರ್ಹತೆ**

1. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.
2. ಎಸ್.ಎಸ್.ಎಲ್.ಸಿ ಯಿಂದ ಪದವಿ ವರೆಗಿನ ಯಾವುದೇ ಪರೀಕ್ಷೆಯಲ್ಲಿ 1 ರಿಂದ 10 ರ್‍ಯಾಂಕ್ ಪಡೆದಿರಬೇಕು.
3. ಸ್ನಾತಕೋತ್ತರ ಪದವಿಯಾದರೆ 1 ರಿಂದ 3 ನೇ ರ್‍ಯಾಂಕ್ ಪಡೆದಿರಬೇಕು.

**✱ ಮಂಜೂರಾತಿ ವಿಧಾನ**

ಪರಿಶಿಷ್ಟ ಪಂಗಡದ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅರ್ಜಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ಅಂಕ ಪಟ್ಟಿಯ ನಕಲು, ವಿದ್ಯಾಸಂಸ್ಥೆಯ ಮುಖ್ಯಸ್ಥರು

ನೀಡಿದ ದೃಡೀಕರಣ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು. ನೀಡಿರುವ ಮಾಹಿತಿಗಳನ್ನು ಪರಿಶೀಲಿಸಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಮಂಜೂರಾತಿ ನೀಡಿದ ನಂತರ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುವ ಸಾರ್ವಜನಿಕ ಸಮಾರಂಭದಲ್ಲಿ ಬಹುಮಾನದ ಚೆಕ್‌ನ್ನು ನೀಡಲಾಗುತ್ತಿದೆ.

### ✱ ಎಂ.ಫಿಲ್ ಮತ್ತು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಶಿಪ್

ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವೂ ಸೇರಿದಂತೆ ಒಟ್ಟು ಹನ್ನೆರಡು ವಿಶ್ವವಿದ್ಯಾನಿಲಯಗಳಿದ್ದು, ಈ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಗೆ ತೊಡಗಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಂಶೋಧನ ಮಾಹಿತಿ ಸಂಗ್ರಹಣೆ ಮುಂತಾದವುಗಳಿಗೆ ಹೆಚ್ಚಿನ ವೆಚ್ಚ ಭರಿಸಬೇಕಾಗುತ್ತದೆ. ಆದ್ದರಿಂದ ಎಂ.ಫಿಲ್ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 8000/- ಸಾವಿರ ಮತ್ತು ಪಿ.ಹೆಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 10,000/- ಸಾವಿರಗಳನ್ನು ನೀಡಲಾಗುತ್ತಿದೆ.

### ✱ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನ ಸಹಾಯ

ವಿದೇಶ ವಿಶ್ವ ವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಲಾಗುವುದು.

### ✱ ಅರ್ಹತಾ ಷರತ್ತುಗಳು

1. ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ವಿದ್ಯಾರ್ಥಿಯು ಕರ್ನಾಟ ರಾಜ್ಯದ ಮೂಲ ನಿವಾಸಿಯಾಗಿದ್ದು, ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.
2. ರಾಜ್ಯದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದ ಯಾವುದೇ ವಿಭಾಗದಲ್ಲಿ ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇಕಡ 60 ಅಂಕ ಗಳಿಸಿರಬೇಕು. ವಿದೇಶದ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಭ್ಯರ್ಥಿಯು ಆಯ್ಕೆಯಾಗಿಬೇಕು.
3. ನಿಯೋಜನೆಗೆ ಆಯ್ಕೆಯಾದ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಲು ಬದ್ದನಾಗಿರಬೇಕು. ಮದ್ಯದಲ್ಲಿ ಶಿಕ್ಷಣವನ್ನು ತೊರೆದ ಪಕ್ಷದಲ್ಲಿ ಸರ್ಕಾರ ದಿಂದ ಮಾಡಿರುವ ವೆಚ್ಚವನ್ನು ಭರಿಸಿಕೊಡಬೇಕು. ವ್ಯಾಸಂಗದಲ್ಲಿ ಅನುತ್ತೀರ್ಣರಾದ ಪಕ್ಷದಲ್ಲಿ ಸ್ವಂತ ಖರ್ಚಿನಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸಬೇಕು.
4. ಆಯ್ಕೆಯಾದ ಅಭ್ಯರ್ಥಿಯ ಕುಟುಂಬದ ಯಾವುದೇ ಸದಸ್ಯರು ವಿದೇಶದಲ್ಲಿ ನೆಲೆಸಿರಬಾರದು.
5. ವಿದ್ಯಾರ್ಥಿಗೆ ಸರ್ಕಾರ ನೀಡುವ ವೆಚ್ಚಕ್ಕಿಂತ ಹೆಚ್ಚುವರಿ ತಗಲುವ ವೆಚ್ಚವನ್ನು ವಿದ್ಯಾರ್ಥಿಯು ಸ್ವಂತ ಮೂಲದಿಂದ ಭರಿಸುವುದು.
6. ಆಯ್ಕೆಯಾಗಿರುವ ಅಭ್ಯರ್ಥಿಯ ವಯಸ್ಸು ತರಬೇತಿಯ ಪ್ರಾರಂಭದಲ್ಲಿ 30 ವರ್ಷಗಳಿಗಿಂತ ಮೀರಬಾರದು.

### ✱ ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪೈಲೆಟ್ ತರಬೇತಿ(ರಾಜ್ಯಮಟ್ಟದ ಯೋಜನೆ)

ಇತ್ತೀಚಿನ ದಿನಗಳಲ್ಲಿ ಭಾರತ ಸರ್ಕಾರವು ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್ ಇಂಡಿಯಾಗಳಲ್ಲಿ ಖಾಲಿಯಿರುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಕಾಯ್ದಿರಿಸಿದ ಪೈಲೆಟ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ. ಆದರೆ ಪೈಲಟ್ ತರಬೇತಿ ಪಡೆಯುವುದು ಬಡ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಕಷ್ಟ ಸಾಧ್ಯವಾಗಿರುವುದರಿಂದ ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯ ವತಿಯಿಂದ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ತರಬೇತಿ ಅವಧಿ 12 ರಿಂದ 18 ತಿಂಗಳು
2. ವಯೋಮಿತಿ 18 ರಿಂದ 22 ವರ್ಷ
3. ವಿದ್ಯಾರ್ಹತೆ 10-2/ಪಿ.ಯು.ಸಿ/ಜೆಸಿಇ-ಎ ಲೆವೆಲ್‌ಗಳಲ್ಲಿ ಭೌತಶಾಸ್ತ್ರ ಮತ್ತು ಗಣಿತ ವಿಷಯ ಗಳನ್ನು ತೆಗೆದುಕೊಂಡು ಉತ್ತೀರ್ಣರಾದ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಅರ್ಹ ರಾಗಿರುತ್ತಾರೆ.

### ✱ ವೃತ್ತಿ ತರಬೇತಿ ಕಾರ್ಯಕ್ರಮ

ಗಿರಿಜನ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನದಲ್ಲಿ ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ನೀಡಲಾಗುವುದು. ತರಬೇತಿ ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

1. ಎಲ್.ಎಂ.ವಿ /ಹೆಚ್.ಎಂ.ವಿ. ಡ್ರೈವಿಂಗ್
2. ಆಟೋಮೊಬೈಲ್ ಸರ್ವಿಸಿಂಗ್
3. ವೆಲ್ಡಿಂಗ್ / ಫ್ಯಾಬ್ರಿಕೇಷನ್
4. ಎಲೆಕ್ಟ್ರೀಷಿಯನ್
5. ಫಿಟ್ಟರ್
6. ರೇಡಿಯೋ / ಟಿ.ವಿ ರಿಪೇರಿ
7. ಕಾರ್ಪೆಂಟರಿ
8. ಕಟ್ಟಿಂಗ್ / ಟೈಲರಿಂಗ್

## ✱ ಪುಸ್ತಕ ಭಂಡಾರ

ವೈದ್ಯಕೀಯ, ತಾಂತ್ರಿಕ ಮತ್ತು ವೃತ್ತಿಪರ ವಿಷಯಗಳು, ಕೃಷಿ ವಿಜ್ಞಾನ, ಪಶು ವಿಜ್ಞಾನ ಕಾಲೇಜುಗಳಲ್ಲಿ ಅಭ್ಯಸಿಸುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಪಠ್ಯ ಪುಸ್ತಕ ಮತ್ತು ಇತರ ಉಪಯುಕ್ತ ಪುಸ್ತಕಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಬುಕ್ ಬ್ಯಾಂಕ್‌ಗಳನ್ನು ಆಯಾ ಕಾಲೇಜುಗಳಲ್ಲಿ ಸ್ಥಾಪಿಸಲಾಗುವುದು.

## ✱ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ

ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿರುವುದರಿಂದ ಇನ್ನು ಮುಂದೆ ಈ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮುಂದುವರೆಸುವಂತೆ ಉತ್ತೇಜಿಸಲು ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿನಿಗೆ ರೂ. 500.00 ಗಳ ವಾರ್ಷಿಕ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

## ✱ ಅಧ್ಯಯನ ಪ್ರವಾಸಕ್ಕೆ ನೆರವು

ತಾಂತ್ರಿಕ ಮತ್ತು ಇತರ ವೃತ್ತಿಪರ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದರೆ ಅಂತಹ ವಿದ್ಯಾರ್ಥಿಗೆ ಪ್ರವಾಸ ಕೈಗೊಳ್ಳುವುದು ಆರ್ಥಿಕವಾಗಿ ಕಷ್ಟವಾಗಬಹುದು. ಆದ್ದರಿಂದ ಈ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಅಧ್ಯಯನ ಪ್ರವಾಸ ವೆಚ್ಚವಾಗಿ ರೂ. 1000.00 ಗಳನ್ನು ನೀಡಲಾಗುವುದು. ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಪ್ರವಾಸದ ವಿವರಗಳನ್ನು ವಿದ್ಯಾ ಸಂಸ್ಥೆಯ ಮುಖ್ಯಸ್ಥರ ಮೂಲಕ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಮಂಜೂರಾತಿಗಾಗಿ ಕಳುಹಿಸಬೇಕು. ಪ್ರವಾಸ ನಂತರ ಪ್ರವಾಸ ಕೈಗೊಂಡ ವಿದ್ಯಾರ್ಥಿಗಳು ಈ ಬಗ್ಗೆ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿದ ವೆಚ್ಚ ಪಟ್ಟಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು.

## ✱ ತರಬೇತಿ

ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವ ಜನರಿಗೆ ಉದ್ಯೋಗ ಕೈಗೊಳ್ಳಲು ನೆರವಾಗುವಂತೆ ವಿವಿಧ ವಿಭಾಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

## ✱ ನವಚೇತನ (ವೃತ್ತಿ ತರಬೇತಿ) ಕಾರ್ಯಕ್ರಮ

ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸರ್ಕಾರದ ಆದೇಶದನ್ವಯ ವಿವಿಧ ವೃತ್ತಿಪರ ಟ್ರೇಡ್‌ಗಳಲ್ಲಿ ತರಬೇತಿಯನ್ನು ನವ ಚೇತನ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿದೆ.

1. ಮೋಟಾರ್ ವೈಂಡಿಂಗ್ ಅಂಡ್ ಹೋಮ್ ಅಪ್ಲೈಯನ್ಸ್‌ಸ್

2. ರೇಡಿಯೋ ಅಂಡ್ ಟಿ.ವಿ ಸರ್ವಿಸಿಂಗ್ ಅಂಡ್ ರಿಪೇರ್
3. ಎಲೆಕ್ಟ್ರಿಕಲ್ ಹೌಸ್ ವೈರಿಂಗ್
4. ರೆಫ್ರಿಜರೇಟರ್ ಅಂಡ್ ಏರ್‌ಕಂಡೀಷನ್
5. ಸ್ಕ್ರೀನ್ ಪ್ರಿಂಟಿಂಗ್
6. ವೆಲ್ಡಿಂಗ್ ಟ್ರೈನಿಂಗ್
7. ಫಿಟ್ಟರ್ ಟ್ರೈನಿಂಗ್
8. ಟರ್ನರ್
9. ಕಾರ್ಪೆಂಟರಿ
10. ಶಿಲ್ಪಕಲಾ ಟ್ರೈನಿಂಗ್
11. ಮ್ಯಾನುಫಾಕ್ಚರಿಂಗ್ ಆಫ್ ಕೇಣ್ ಪ್ರಾಡಕ್ಟ್ಸ
12. ಕಾಯರ್ ಪ್ರಾಡಕ್ಟ್ಸ
13. ಹ್ಯಾಂಡ್‌ಲೂಮ್ ಟ್ರೈನಿಂಗ್
14. ಪವರ್‌ಲೂಮ್ ಟ್ರೈನಿಂಗ್
15. ಸಿಲ್ಕ್ ರೀಲಿಂಗ್ ಟ್ರೈನಿಂಗ್
16. ಹ್ಯಾಂಡ್ ವರ್ಕ್ ಅಂಡ್ ಎಂಬ್ರಾಯಿಡರಿ ಟ್ರೈನಿಂಗ್
17. ಬ್ಯೂಟಿಷಿಯನ್ ಟ್ರೈನಿಂಗ್
18. ಪ್ಯಾಷನ್ ಡಿಸೈನಿಂಗ್ ಟ್ರೈನಿಂಗ್
19. ಟ್ರೈನಿಂಗ್ ಫಾರ್‌ಮಶ್ ರೂಮ್ ಕಲ್ಟಿವೇಶನ್
20. ಟ್ರೈನಿಂಗ್ ಇನ್ ಹೋಂ ಮೇಡ್ ಪ್ರಾಡಕ್ಟ್ಸ
21. ಪ್ಲಂಬಿಂಗ್ ಟ್ರೈನಿಂಗ್
22. ಟ್ರೈನಿಂಗ್ ಫಾರ್ ಬ್ಲಾಂಕೆಟ್ ವೀವಿಂಗ್
23. ಖೈರಿ ಟ್ರೈನಿಂಗ್
24. ಡ್ರೈವಿಂಗ್ ಟ್ರೈನಿಂಗ್
25. ಮ್ಯಾನುಫಾಕ್ಚರಿಂಗ್ ಆಫ್ ಬೇಕರಿ ಪ್ರಾಡಕ್ಟ್ಸ
26. ಬಿದ್ರಿ ವರ್ಕ್ಸ್
27. ಮ್ಯಾಸನರಿ ಅಂಡ್ ಪೇಂಟಿಂಗ್
28. ಆಟೋಮೋಬೈಲ್ ಸರ್ವಿಸಿಂಗ್
29. ಟೈಲರಿಂಗ್
30. ಕಂಪ್ಯೂಟರ್ ರಿಲೇಟೆಡ್ ಟ್ರೈನಿಂಗ್
31. ಇಂಟೀರಿಯರ್ ಡೆಕೊರೇಟರ್ ಅಸಿಸ್ಟಿಂಗ್
32. ಡೀಸೆಲ್ ಇಂಜಿನ್ ಅಂಡ್ ಟ್ರಾಕ್ಟರ್ ರಿಪೇರ್ಸ್
33. ಪ್ಯಾಕೇಜಿಂಗ್
34. ಅಸೆಂಬಲಿಂಗ್ ಎಲೆಕ್ಟ್ರಿಕಲ್ಸ್
35. ಮ್ಯಾನುಫ್ಯಾಕ್ಚರ್ ಆಫ್ ಲೆದರ್ ಗೂಡ್ಸ್
36. ಸರ್ವಿಸಿಂಗ್ ಎಲೆಕ್ಟ್ರಾನಿಕ್ಸ್ ವಾಚಸ್
37. ಟೈರ್ ರೀಟ್ರೇಡಿಂಗ್
38. ಅಲ್ಯುಮಿನಿಯಂ ಫ್ಯಾಬ್ರಿಕೇಷನ್
39. ಲ್ಯಾಂಡ್ ಸ್ಕೇಪಿಂಗ್
40. ಫೋಟೋಗ್ರಾಫಿ ಅಂಡ್ ವೀಡಿಯೋಗ್ರಾಫಿ
41. ಹೋಮ್ ಸರ್ವಿಸಿಂಗ್
42. ಸೆಕ್ಯೂರಿಟಿ ಏಜೆನ್ಸೀಸ್

**✱ ವಿವರ**

ಸರ್ಕಾರದ ಅದೇಶದ ಅನುಸಾರ ರಚಿತವಾದ ಆಯ್ಕೆ ಸಮಿತಿಯ ಮೂಲಕ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದು. ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ನಿಯಮಾನುಸಾರ ಮಾಸಿಕ ರೂ. 250.00 ರಂತೆ ತಿಂಗಳಿಗೆ ಶಿಷ್ಯ ವೇತನ ನೀಡಲಾಗುವುದು. ಹಾಗೂ ತರಬೇತಿ ನೀಡುವ ಸಂಸ್ಥೆಗೆ ರೂ. 250.00 ರಂತೆ ತರಬೇತಿ ಶುಲ್ಕ ನೀಡಲಾಗುವುದು.

**✱ ಅರ್ಹತೆ**

1. ಅಭ್ಯರ್ಥಿಯು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.
2. ನಿರುದ್ಯೋಗಿಯಾಗಿರಬೇಕು.
3. ತರಬೇತಿಗೆ ಅನುಗುಣವಾಗಿ ವಿದ್ಯಾರ್ಹತೆಹೊಂದಿರಬೇಕು.

**✱ ಕಾನೂನು ಪದವೀಧರರಿಗೆ ಶಿಷ್ಯವೇತನ**

ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚುಜ್ಞಾನಗಳಿಸಿಕೊಳ್ಳಲು ನೆರವಾಗುವಂತೆ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯ ಅವಧಿಯ ನಾಲ್ಕು ವರ್ಷದ್ದಾಗಿದೆ. ತರಬೇತಿಯ ಅವಧಿಯಲ್ಲಿ ತಿಂಗಳಿಗೆ ರೂ. 1000/- ರಂತೆ ಶಿಷ್ಯ ವೇತನ ನೀಡಲಾಗುವುದ.

**✱ ಅರ್ಹತೆ**

1. ಅಭ್ಯರ್ಥಿಯು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.
2. ಕಾನೂನು ಪದವೀಧರರಾಗಿರಬೇಕು.
3. ಪ್ರತಿ ವರ್ಷ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಈ ನೆರವು ನೀಡಲಾಗುವುದು.
4. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ವಕೀಲರ ಸಂಘದ ಅಧ್ಯಕ್ಷರು, ಸರ್ಕಾರಿ ವಕೀಲರು, ಜಿಲ್ಲಾ ಕಾನೂನು ನೆರವು ಸಮಿತಿಯ ಕಾರ್ಯದರ್ಶಿಗಳು ಜಿಲ್ಲಾ ಸರ್ಕಾರಿ ವಕೀಲರು ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯಲ್ಲಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**✱ ಕಾನೂನು ಪದವೀಧರರಿಗೆ ಧನ ಸಹಾಯ**

ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಕೈಗೊಳ್ಳಲು ಹಾಗೂ ವಕೀಲರ ಸಂಘದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಸಹಾಯವಾಗುವಂತೆ ರೂ 5000.00 ಗಳ ಧನ ಸಹಾಯವನ್ನು ನೀಡಲಾಗುತ್ತದೆ.

**✱ ಸ್ವಯಂ ಉದ್ಯೋಗ ತರಬೇತಿ (ಮೋಟಾರು ವಾಹನ ತರಬೇತಿ)**

ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಜಿಲ್ಲಾವಲಯ ಯೋಜನೆಯಡಿಯಲ್ಲಿ ಲಘು ವಾಹನ ಚಾಲನೆ ಮತ್ತು ಆಟೋರಿಕ್ಷಾ ಚಾಲನೆಯಲ್ಲಿ 1 ತಿಂಗಳ ತರಬೇತಿ ನೀಡಿ ನಂತರ ವಾಹನ ನಡೆಸಲು ಪರವಾನಗಿ ಸಹ ಒದಗಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ರೂ. 150.00 / 300.00 ಶಿಷ್ಯು ವೇತನ ನೀಡಲಾಗುವುದು.

**✱ ಗಿರಿಜನ ಉಪಯೋಜನೆ**

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯಿದ್ದು, ಈ ಯೋಜನೆಯನ್ನು ತಾಲ್ಲೂಕು ಪಂಚಾಯಿತಿ ಮುಖಾಂತರ ವಿವಿಧ ಅಭಿವೃದ್ಧಿ ಇಲಾಖೆಗಳ ಸಹಕಾರದೊಂದಿಗೆ ಅನುಷ್ಠಾನಗೊಳಿಸಲಾಗುವುದು.

## ✱ ಗಿರಿಜನ ಉಪಯೋಜನೆಯ ಧ್ಯೇಯೋದ್ದೇಶಗಳು :

- ✱ ಸಮಗ್ರ ಗಿರಿಜನ ಅಭಿವೃದ್ದಿ ಯೋಜನಾ ಪ್ರದೇಶಗಳು ಹಾಗೂ ಇತರೆ ಪ್ರದೇಶಗಲ್ಲಿರುವ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸಲುವುದು.
- ✱ ಪರಿಶಿಷ್ಟ ವರ್ಗದವರ ಕಲೆ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು.
- ✱ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ / ಹಾಡಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸುವುದು.
- ✱ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ದಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಆ ದಿಸೆಯಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುವುದು.
- ✱ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ ಚರಂಡಿ, ಕಾಮಗಾರಿಗಳು, ಆರೋಗ್ಯ ಕೇಂದ್ರ ಇತ್ಯಾದಿ ಸೌಲಭ್ಯಗಳನ್ನು ಗಿರಿಜನ ಉಪಯೋಜನೆಯಡಿ ಒದಗಿಸಲಾಗುತ್ತದೆ.

## ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಗಿರಿಜನ ಉಪಯೋಜನೆಯಡಿ ಅನುಷ್ಟಾನಗೊಳ ಸುತ್ತಿರುವ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.

### ✱ ಕೃಷಿ

ಕೃಷಿ ಇಲಾಖೆಯ ವತಿಯಿಂದ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

1. ಕೃಷಿ ಪರಿಕರಗಳು : (ಶೇಕಡಾ 100 ಸಹಾಯಧನ ರೂ. 2,800/- ಪ್ರತಿ ಹೆಕ್ಟೇಟರ್)
2. ಧಾನ್ಯ ಸಂಗ್ರಹಣಾ ಕಣಜಗಳು : (ಶೇಕಡಾ 75ರ ಸಹಾಯಧನ ರೂ. 1,000/-ರ ಗರಿಷ್ಟ ಮಿತಿಯಲ್ಲಿ)
3. ಆದುನಿಕ ಕೃಷಿ ಉಪಕರಣಗಳು : (ಶೇಕಡಾ 75ರ ಸಹಾಯಧನ ರೂ. 5,000/-ರ ಮಿತಿಯಲ್ಲಿ)
4. ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು: (ಶೇಕಡಾ 75ರ ಸಹಾಯಧನ ರೂ. 1,000/-ರ ಗರಿಷ್ಟ ಮಿತಿಯಲ್ಲಿ)
5. ಡಿಸೇಲ್/ಸೀಮೆಎಣ್ಣೆ ಪಂಪ್ ಸೆಟ್ಟ್‌ಗಳು: (ಶೇಕಡಾ 75ರ ಸಹಾಯಧನ ರೂ. 10,000/-ರ ಗರಿಷ್ಟ ಮಿತಿಯಲ್ಲಿ)
6. ಪವರ್ ಟಿಲ್ಲರ್‌ಗಳು: (ಶೇಕಡಾ 75ರ ಸಹಾಯಧನ ರೂ. 50,000/-ರ ಗರಿಷ್ಟ ಮಿತಿಯಲ್ಲಿ)
7. ಜಲಂತರ್ಗ ಪಂಪ್ ಸೆಟ್ಟ್‌ಗಳು: (ಶೇಕಡಾ 75ರ ಸಹಾಯಧನ ರೂ. 25,000/-ರ ಗರಿಷ್ಟ ಮಿತಿಯಲ್ಲಿ)

### ✱ ತೋಟಗಾರಿಕೆ

1. ರೂ.2,165/-ರಿಂದ ರೂ.2,700/-ರವರೆಗಿನ ವೆಚ್ಚದಲ್ಲಿ ಅರ್ಧ ಎಕರೆ ತೆಂಗಿನ ತೋಟ/1ಎಕರೆ ಹಣ್ಣಿನ ತೋಟ/ಹೂವಿನತೋಟ ನಿರ್ಮಾಣ.
2. ತೋಟಗಳ ಪಾಲನೆಗೆ ಮೊದಲನೆಯ ವರ್ಷ ರೂ.650.00 ಎರಡನೆಯ ವರ್ಷ ರೂ.350.00 ಗಳ ಸಹಾಯಧನ ನೀಡುವುದು.
3. ತೋಟಗಾರಿಕೆಯಲ್ಲಿ ತರಬೇತಿ.

### ✱ ಪಶುಸಂಗೋಪನೆ

ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ನಬಾರ್ಡ್ ದರಗಳಲ್ಲಿ ಶೇಕಡ 75ರ ಸಹಾಯಧನದಲ್ಲಿ ಮಿಶ್ರತಳಿ ಹಸುಘಟಕ, ಎಮ್ಮೆಘಟಕ, ಕುರಿ ಘಟಕ ಮತ್ತು ಹಂದಿ ಘಟಕಗಳ ಪೂರೈಕೆ.

### ✱ ಅರಣ್ಯ ಇಲಾಖೆ

ಸಾಮಾಜಿಕ ಭದ್ರತಾ ನೆಡುತೋಪು ರೂ.2500/–ಗಳ ವೆಚ್ಚದಲ್ಲಿ ಸ್ಥಾಪಿಸುವುದು, ಕುಶಲಕರ್ಮಿಗಳಿಗೆ ಉಚಿತ ಬಿದಿರುಬೆತ್ತ ಸರಬರಾಜು, ಮನೆಗಳ ನಿರ್ಮಾಣಕ್ಕೆ ರೂ.10.000/– ಮಿತಿಯಲ್ಲಿ ಗೃಹ ನಿರ್ಮಾಣ ವಸ್ತುಗಳ ಸರಬರಾಜು.

### ✱ ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು

1. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಪಂಗಡದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತಹ ಜೇನು ಸಾಕಾಣಿಕೆ, ಬಡಗಿತನ, ಬಿದುರು ಬೆತ್ತ ಮತ್ತು ಇತರೆ ವೃತ್ತಿಗಳಲ್ಲಿ ತರಬೇತಿ.
2. ವಿವಿಧ ವೃತ್ತಿಗಳನ್ನು ನಿರ್ವಹಿಸುವ ಗ್ರಾಮೀಣ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಉಚಿತ ಉಪಕರಣಗಳ ವಿರತಣೆ.
3. ಪರಿಶಿಷ್ಟ ಪಂಗಡದವರಿಗೆ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಲಿವಿಂಗ್ ಕಮ್ ವರ್ಕ್ ಶೆಡ್‌ಗಳನ್ನು ನಿರ್ಮಿಸಲು ಘಟಕಕ್ಕೆ ರೂ. 25,000/–ಗಳ ಸಹಾಯ ಧನ ಮಂಜೂರಾತಿ.

### ✱ ರೇಷ್ಮೆ ಕೃಷಿ

1. ಹಿಪ್ಪು ನೇರಳೆ ಬೇಸಾಯಕ್ಕೆ ರೂ. 2,000/– ಗಳವರೆಗೆ ಸಹಾಯಧನ.
2. ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಶೇಕಡಾ 60ರ ಸಹಾಯಧನ ಗರಿಷ್ಟ ರೂ. 25,000/– ಗಳಿಗೆ ಒಳಪಟ್ಟು ನೀಡಲಾಗುವುದು.
3. ಪ್ಯಾಕೇಜ್ ಆಫ್ ಬೆನಿಫಿಟ್ಸ್ ಯೋಜನೆ.
4. ನೀರಾವರಿ ಪಂಪ್‌ಸೆಟ್ಟುಗಳಿಗೆ ಸಹಾಯ
5. ರೇಷ್ಮೆಹುಳಿಗಳನ್ನು ಸಾಕುವ ಸಲಕರಣಿಗಳ ಸರಬರಾಜು.

### ✱ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ

1. ಪರಿಶಿಷ್ಟ ವರ್ಗದ ಕಾಲೋನಿಗಳ ವಿದ್ಯುದೀಕರಣ.
2. ಪರಿಶಿಷ್ಟ ವರ್ಗದ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.
3. ಕುಟೀರ ಜೋತಿ ಯೋಜನೆಯಡಿ ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವುದು.

### ✱ ರಸ್ತೆ ಮತ್ತು ಸೇತುವೆ

ಗ್ರಾಮೀಣ ಅಭಿವೃದ್ದಿ ಇಂಜಿನಿಯರಿಂಗ್ ಇಲಾಖಾವತಿಯಿಂದ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮಗಳನ್ನು ಗಿರಿಜನ ಉಪಯೋಜನೆಯಡಿ ಜಿಲ್ಲಾವಲಯದಲ್ಲಿ ಕೈಗೊಳ್ಳಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮೀಣ ನೀರು ಪೂರೈಕೆ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳು ಹಾಗೂ ಕಿರು ನೀರು ಸರಬರಾಜು ಯೋಜನೆಗಳ ಮೂಲಕ ಒದಗಿಸಲಾಗುತ್ತಿದೆ.

### ✱ ಲ್ಯಾಂಪ್ ಸಹಕಾರ ಸಂಘಗಳು

ಜಿಲ್ಲೆಯಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ 2 ಗಿರಿಜನ ದೊಡ್ಡಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್) ಕಾರ್ಯನಿರ್ವಹಿಸುತ್ತಿದೆ. ಈ ಸಂಘಗಳಲ್ಲಿ ಪರಿಶಿಷ್ಟ ವರ್ಗದ ಜನರನ್ನು

ಸದಸ್ಯರನ್ನಾಗಿ ನೊಂದಾಯಿಸಿಕೊಂಡು ಅವರಿಗೆ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸುವ ಕಿರು ಅರಣ್ಯ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾನ ಮಾಡಿ ಲಾಭಾಂಶವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಅವಶ್ಯವಿರುವ ಸದಸ್ಯರಿಗೆ ಅಲ್ಪಾವಧಿ ಸಾಲವನ್ನು ಕೂಡ ಈ ಸಂಘಗಳು ನೀಡಲಾಗುತ್ತಿದೆ. ಕೆಲವು ಸಂಘಗಳು ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದ್ದು, ಸಂಸ್ಕರಿಸಿ ಮಾರಾಟ ಮಾಡುವುದರಿಂದ, ಹೆಚ್ಚಿನ ಲಾಭ ಪಡೆಯಲು ಅವಕಾಶವಿರುತ್ತದೆ. ಈ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಟ್ರೈಫೆಡ್ ಸಂಸ್ಥೆ ಮೂಲಕ ಹೆಚ್ಚಿನ ಸಹಾಯ ದೊರೆಯುತ್ತದೆ. ಗಿರಿಜನ ಪ್ರದೇಶಗಳಲ್ಲಿ ಈ ಸಹಕಾರ ಸಂಘಗಳು ಜೀವನಾವಶ್ಯಕ ಪದಾರ್ಥಗಳನ್ನು ನ್ಯಾಯ ಬೆಲೆಗೆ ವಿತರಿಸುವುದರ ಜೊತೆಗೆ ಸದಸ್ಯರು ಹೆಣೆದ ಬುಟ್ಟಿ ಮತ್ತಿತರ ಬಿದಿರು ಮತ್ತು ಬೆತ್ತದ ಸಾಮಗ್ರಿಗಳನ್ನು ಮಾರಾಟ ಮಾಡುವ ವ್ಯವಸ್ಥೆ ಇರುತ್ತದೆ. ಜಿಲ್ಲೆಯಲ್ಲಿ ಹೆಚ್.ಡಿ.ಕೋಟೆ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಲ್ಯಾಂಪ್ಸ್ ಸಹಕಾರ ಸಂಘಗಳಿವೆ.

## ಕೇಂದ್ರ ಸರ್ಕಾರದ ಯೋಜನೆಗಳು

ಕೇಂದ್ರ ಸರ್ಕಾರವು ಪರಿಶಿಷ್ಟ ವರ್ಗದವರ ಸರ್ವಾಂಗೀಣ ಅಭಿವೃದ್ಧಿಗೆ ಕೆಳಕಂಡ ಯೋಜನೆಗಳಡಿ ಅನುದಾನ ಬಿಡುಗಡೆ ಮಾಡಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಹಕರಿಸುತ್ತಿದೆ.

### ✱ ವಿದ್ಯಾರ್ಥಿನಿಲಯ ಹಾಗೂ ಆಶ್ರಮ ಶಾಲೆಗಳ ಕಟ್ಟಡಗಳ ನಿರ್ಮಾಣ

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಇಲಾಖೆಯ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮಶಾಲೆಗಳಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ.

### ✱ ಅರ್ಹ ಮತ್ತು ಸಂಬಂಧಿತ ಯೋಜನೆಗಳು

ಅರ್ಹ ಪರಿಶಿಷ್ಟ ವರ್ಗದ ಅಭ್ಯರ್ಥಿಗಳೀಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿದೆ. ಪ್ರಮುಖವಾಗಿ ಕೇಂದ್ರ ಲೋಕಸೇವಾ ಆಯೋಗದಿಂದ ನಡೆಸಲಾಗುತ್ತಿರುವ ಕೇಂದ್ರ ನಾಗರೀಕ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ (ಐ.ಎ.ಎಸ್, ಐ.ಎಫ್.ಎಸ್, ಐ..ಪಿ.ಎಸ್) ಹಾಗೂ ಸಿಬ್ಬಂದಿ ನೇಮಕಾತಿ ಆಯೋಗ, ರೈಲ್ವೆ ಹಾಗೂ ಬ್ಯಾಂಕಿಂಗ್ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಸರ್ಕಾರಿ ಅಥವಾ ಪ್ರತಿಷ್ಠಿತ ಖಾಸಗಿ ತರಬೇತಿ ಸಸ್ಥೆಗಳ ಮುಖಾಂತರ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುವುದು. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ ನಿಗದಿ ಮಾಡಿರುವ ದರದಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

### ✱ ವೃತ್ತಿಪರ ತರಬೇತಿ ಕಾರ್ಯಕ್ರಮಗಳು

**ಕಂಪ್ಯೂಟರ್ ತರಬೇತಿ ಃ** ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗ ಯುವಕ / ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕೋರ್ಸ್‌ಗಳಲ್ಲಿ 6 ತಿಂಗಳ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತದೆ. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ರೂ.500 ಸ್ಟೈಪಂಡ್ ನೀಡಲಾಗುತ್ತದೆ.

**ಲಘುವಾಹನ ಮತ್ತು ಬಾರಿ ವಾಹನ ಚಾಲನೆ ತರಬೇತಿಃ** ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಜಿಲ್ಲಾವಲ ಯೋಜನೆಯಲ್ಲಿ ಲಘುವಾಹನ ಚಾಲೆನ ಮತ್ತು ಭಾರಿ ವಾಹನ ಚಾಲನೆಯಲ್ಲಿ ಒಂದು ತಿಂಗಳ ತರಬೇತಿ ನೀಡಿ ನಂತರ ವಾಹನ ನಡೆಸಲು ಪರವಾನಗಿ ಸಹ ಒದಗಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ರೂ. 150.00 ಮತ್ತು 500.00 ರಷ್ಟು ಶಿಷ್ಯವೇತನ ನೀಡಲಾಗುವುದು.

### ✱ ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯ

ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗೆ ಗಿರಿಜನ ಉಪಯೋಜನೆಗೆ ಕೇಂದ್ರ ಸರ್ಕಾರವು ವಿಶೇಷ ಕೇಂದ್ರೀಯ ಸಹಾಯವನ್ನು ಮಂಜೂರು ಮಾಡುತ್ತಿದ್ದು, ಈ ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.

1. ಪರಿಶಿಷ್ಟ ವರ್ಗದವರ ಕುಟುಂಬಗಳಿಗೆ ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತಹ ನಿರಂತರ ಆದಾಯ ತರುವಂತಹ ಕೃಷಿ. ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಗ್ರಾಮೀಣ ಸಣ್ಣ ಕೈಗಾರಿಕೆ, ಮೀನುಗಾರಿಕೆ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರಾತಿ.
2. ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವ ಮೂಲಭೂತ ಸೌಲಭ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಧನಸಹಾಯ.
3. ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ / ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಮಾಹಿತಿ ತಂತ್ರಜ್ಞಾನವೂ ಸೇರಿದಂತೆ ವಿವಿಧ ವೃತ್ತಿಪರ ತರಬೇತಿ ಕಾರ್ಯಕ್ರಮಗಳ ಅನುಷ್ಠಾನ.

### ✱ ಭಾರತ ಸಂವಿಧಾನ ಅನುಚ್ಛೇದ 275(1) ರಡಿ ರಾಜ್ಯ ಯೋಜನೆಗಳಗೆ ಕೇಂದ್ರೀಯ ನೆರವು

ಭಾರತ ಸಂವಿಧಾನ ಅನುಚ್ಛೇದ 275(1) ರಡಿ ರಾಜ್ಯ ಯೋಜನೆಗಳಿಗೆ ಕೇಂದ್ರೀಯ ನೆರವಿನಡಿ ಕೇಂದ್ರ ಸರ್ಕಾರ ಕೆಳಕಂಡ ನಿರ್ದಿಷ್ಟ ಯೋಜನೆಗಳಿಗೆ ಅನುದಾನವನ್ನು ಮಂಜೂರು ಮಾಡುತ್ತಿದೆ.

1. ಪರಿಶಿಷ್ಟ ವರ್ಗದವರ ಕಾಲೋನಿಗಳಿಗೆ ಹ್ಯಾಂಡ್ ಪಂಪ್ ಕೊಳವೆ ಬಾವಿ ಮತ್ತು ಕಿರುನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರು ಪೂರೈಕೆ.
2. ಪರಿಶಿಷ್ಟ ವರ್ಗದವರ ಆರೋಗ್ಯ ತಪಾಸಣೆ ಮತ್ತು ಔಷಧೋಪಚಾರಕ್ಕೆ ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ.
3. ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಚರಂಡಿ ಮತ್ತು ನೈರ್ಮಲೀಕರಣ ಕಾಮಗಾರಿಗಳ ಅನುಷ್ಠಾನ.
4. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ.
5. ಲ್ಯಾಂಪ್ ಸಹಕಾರ ಸಂಘಗಳ ಮೂಲಕ ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕ ಸ್ಥಾಪನೆ.
6. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸೋಲಾರ್ ಬೀದಿ ದೀಪ ಸೌಲಭ್ಯ ಒದಗಿಸುವುದು.
7. ಪರಿಶಿಷ್ಟ ವರ್ಗದವರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕಾಲೋನಿಗಳಲ್ಲಿ ಸಮುದಾಯ ಭವನ ನಿರ್ಮಾಣ.
8. ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಏತ ನೀರಾವರಿ, ತುಂತುರು ನೀರಾವರಿ ಮತ್ತು ಹನಿ ನೀರಾವರಿ ಸೌಲಭ್ಯ ಒದಗಿಸಲು ಕಾರ್ಯಕ್ರಮಗಳ ಅನುಷ್ಠಾನ.
9. ಪರಿಶಿಷ್ಟ ವರ್ಗದ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆ ಬಾವಿ ಮತ್ತು ಸಾಮೂಹಿಕ ನೀರಾವರಿ ಬಾವಿಗಳ ನಿರ್ಮಾಣಕ್ಕೆ ಸಹಾಯಧನ.
10. ಪರಿಶಿಷ್ಟ ವರ್ಗದವರಿಗೆ ಜಮೀನಿನಲ್ಲಿ ಕೃಷಿ ಇಲಾಖೆಯ ವತಿಯಿಂದ ಜಲಾನಯನ ಕಾಮಗಾರಿಗಳ ಅನುಷ್ಠಾನ.

**✱ ಮೂಲನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ಕಾಯ್ತ್ರಮಗಳು** ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ವರ್ಗದ ಜೇನು ಕುರುಬ ಮತ್ತು ಕೊರಗ ಜಾತಿಗಳನ್ನು ಮೂಲನಿವಾಸಿ ಬುಡಕಟ್ಟು ಗುಂಪುಗಳೆಂದು ಗುರುತಿಸಲಾಗಿದೆ. ಈ ಜನಾಂಗದವರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುತ್ತಿದೆ. ಸದರಿ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿವೆ.

**ಅ) ಮೂಲಭೂತ ಸೌಲಭ್ಯಃ**

1. ಜೇನುಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಸಂಪರ್ಕ ರಸ್ತೆ ನಿರ್ಮಾಣ.
2. ಜೇನುಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಕಿರು ನೀರು ಸರಬರಾಜು ಯೋಜನೆ / ಹ್ಯಾಂಡ್ ಪಂಪ್ ಕೊಳವೆ ಬಾವಿ ಮೂಲಕ ಕುಡಿಯುವ ನೀರಿನ ವ್ಯವಸ್ಥೆ.
3. ಜೇನುಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಚರಂಡಿ ನಿರ್ಮಾಣ
4. ಜೇನುಕುರುಬ ಮತ್ತು ಕೊರಗ ಮನೆಗಳಿಗೆ ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುದ್ದೀಪ ಸೌಲಭ್ಯ.
5. ಆರೋಗ್ಯ ತಪಾಸಣೆಗೆ ಸಂಚಾರಿ ಆರೋಗ್ಯ ಘಟಕ ಸ್ಥಾಪನೆ.

**ಆ) ಆರ್ಥಿಕ ಕಾರ್ಯಕ್ರಮಗಳುಃ**

1. ಕೃಷಿ ಅಭಿವೃದ್ಧಿಗೆ ವ್ಯವಸಾಯ ಉಪಕರಣಗಳು ಮತ್ತು ಬೀಜಗೊಬ್ಬರ ವಿತರಣೆ, ನಬಾರ್ಡ್ ದರದಲ್ಲಿ ಉಳುಮೆ ಎತ್ತುಗಳು ಮತ್ತು ಗಾಡಿ ಸರಬರಾಜಿಗೆ ಸಹಾಯಧನ, ಜಲಾನಯನ ಕಾರ್ಯಕ್ರಮಗಳ ಅನುಷ್ಠಾನ.
2. ತೋಟಗಾರಿಕೆ ಕಾರ್ಯಕ್ರಮದಡಿ ಉಚಿತ ಹಣ್ಣು, ತೆಂಗು, ಹೂವಿನ ತೋಟ, ರಬ್ಬರ್ ತೋಟ ಇತ್ಯಾದಿಗಳ ಸ್ಥಾಪನೆ ಮತ್ತು 2 ವರ್ಷಗಳ ನಿರ್ವಹಣೆ.
3. ಹೈನುಗಾರಿಕೆ ಕಾರ್ಯಕ್ರಮದಡಿ ನಬಾರ್ಡ್ ದರದಲ್ಲಿ ಎಮ್ಮೆ, ಸೀಮೆ ಹಸು, ಹಂದಿ ಘಟಕಗಳ ಸ್ಥಾಪನೆಗೆ ಸೇಕಡಾ 75 ರಷ್ಟು ಸಹಾಯಧನ.
4. ಅರಣ್ಯ ಇಲಾಖೆಯಿಂದ ಬೆತ್ತ ಮತ್ತು ಬಿದಿರು ವಿತರಣೆ.
5. ಗ್ರಾಮೀನ ಮತ್ತು ಸಣ್ಣ ಕೈಗಾರಿಕೆಗಳ ವತಿಯಿಂದ ವಸತಿ ಕಾರ್ಯಾಗಾರ ಮತ್ತು ಸಾಮೂಹಿಕ ಕಾರ್ಯಾಗಾರ ನಿರ್ಮಾಣ ಹಾಗೂ ತರಬೇತಿಗಳ ಅನುಷ್ಠಾನ.
6. ತರಬೇತಿ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮಗಳಡಿ ಬೆತ್ತ ಮತ್ತು ಬಿದುರು, ಮರಗೆಲಸ, ಲಘುವಾಹನ ಚಾಲನೆ, ಹೊಲಿಗೆ ತರಬೇತಿ ಮತ್ತು ಸೀಮೆಂಟ್ ಹಾಲೋಬ್ರಿಕ್ ತಯಾರಿಕೆಯಲ್ಲಿ ತರಬೇತಿಗಳನ್ನು ಉಚಿತವಾಗಿ ನೀಡುವುದು. ತರಬೇತಿ ಅವದಿಯಲ್ಲಿ ಮಾಸಿಕ 500/–ರೂ.ಗಳ ಶಿಷ್ಯವೇತನ ನೀಡಲಾಗುತ್ತಿದೆ.
7. ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಸದಸ್ಯರನ್ನಾಗಿ ಮಾಡುವುದು, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಮಾರಾಟಕ್ಕೆ ಲ್ಯಾಂಪ್ಸ್ ಸಂಘಗಳ ಮುಖಾಂತರ ಸಹಕಾರ.

**ಇ) ವಸತಿ**

1. ವಸತಿ ರಹಿತ ಜೇನುಕರುಬ ಮತ್ತು ಕೊರಗ ಜನಾಂಗದವರಿಗೆ ಅಂಬೇಡ್ಕರ್ / ಆಶ್ರಯ ಯೋಜನೆಗಳಡಿ ರೂ. 20000 ಸಾವಿರ ವೆಚ್ಚದಲ್ಲಿ ಉಚಿತ ಮನೆಗಳ ನಿರ್ಮಾಣ
2. ಜೇನು ಕುರುಬ ಮತ್ತು ಕೊರಗ ಜನರು ವಾಸಿಸುವ ಹಳೆಯ ಮನೆಗಳ ದುರಸ್ತಿಗೆ ರೂ. 10,000 ಸಾವಿರ ಸಹಾಯಧನ.

**ಈ) ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳುತ್ತಿರುವ ಕಾರ್ಯಕ್ರಮಗಳುಃ** ಸರ್ಕಾರವು ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಹಾಕಿಕೊಂಡಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಕೂಡ ಹಲವಾರು ಕಾರ್ಯಕ್ರಮಗಳನ್ನು / ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶವಿರುತ್ತದೆ.

ಭಾರತ ಸರ್ಕಾರದ ಇತ್ತೀಚಿನ ಮಾರ್ಗ ಸೂಚಿಯ ಪ್ರಕಾರ ಕೆಳಕಂಡ ಯೋಜನೆ / ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದ ಸಹಾಯ ಧನ ಮಂಜೂರು ಮಾಡಲು ಅವಕಾಸ ಕಲ್ಪಿಸಲಾಗಿದೆ. ಕೆಲವು ಪ್ರಮುಖ ಕಾರ್ಯಕ್ರಮಗಳ ವಿವರ ಕೆಳಕಂಡಂತಿವೆ :

1. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು.
2. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ರಹಿತ ಶಾಲೆಗಳು.
3. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರಾತ್ರಿ ಶಾಲೆಗಳು

4. ಲೈಬ್ರರಿ
5. ಸಂಚಾರಿ ಲೈಬ್ರರಿ ಮತ್ತು ಆಡಿಯೋ ವಿಶುಯಲ್ ಘಟಕ
6. 10 ಹಾಸಿಗೆಗಳ ಆಸ್ಪತ್ರೆ / ಡಿಸ್ಪೆನ್ಸರಿ
7. ಸಂಚಾರಿ ಆರೋಗ್ಯ ಘಟಕ
8. ಕಂಪ್ಯೂಟರ್ ತರಬೇತಿ ಕೇಂದ್ರ
9. ಬೆರಳಚ್ಚು ಮತ್ತು ಶೀಘ್ರ ಲಿಪಿ ತರಬೇತಿ ಕೇಂದ್ರ.
10. ಮರಗೆಲಸ ತರಬೇತಿ.
11. ಟಿ.ವಿ / ವಿ.ಸಿ.ಆರ್ / ಟೇಪ್‌ರೇಕಾರ್ಡ್‌ರ್ / ರೇಡಿಯೋ ತರಬೇತಿ ಕೇಂದ್ರ
12. ಬೆತ್ತ ಮತ್ತು ಬಿದುರು ತರಬೇತಿ ಕೇಂದ್ರ
13. ತೆಂಗು ನಾರಿನ ತರಬೇತಿ ಕೇಂದ್ರ ಮತ್ತು ಅಗರಬತ್ತಿ ತರಬೇತಿ ಕೇಂದ್ರ
14. ಪ್ರಿಂಟಿಂಗ್ ಕಂಪೋಸಿಂಗ್ ಮತ್ತು ಬುಕ್‌ಬೈಂಡಿಂಗ್ ತರಬೇತಿ
15. ಫಿಟ್ಟರ್ ಮತ್ತು ವೆಲ್ಡಿಂಗ್ ಮತ್ತು ಹ್ಯಾಂಡ್‌ಲೂಮ್ ತರಬೇತಿ.
16. ನಿಟ್ಟಿಂಗ್ ವೀವಿಂಗ್ ಮತ್ತು ಹ್ಯಾಂಡ್‌ಲೂಮ್ ತರಬೇತಿ.
17. ಸ್ಕೂಟರ್ ಮತ್ತು ಮೋಟಾರ್ ಸೈಕಲ್ ರಿಪೇರಿ ತರಬೇತಿ
18. ಬಾಲವಾಡಿ / ಶಿಶವಿಹಾರ ಕೇಂದ್ರಗಳು.
19. ಪರಿಶಿಷ್ಟ ವರ್ಗದವರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.

ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮೇಲ್ಕಾಣಿಸಿದ ಯಾವುದೇ ಯೋಜನೆಗಳನ್ನು ಹಮ್ಮಿಕೊಳ್ಳಬಯಸಿದಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಜಿಲ್ಲಾಧಿಕಾರಿಗಳ ತಪಾಸಣಾ ವರದಿಯೊಂದಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ನಿರ್ದೇಶನಾಲಯದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರಕ್ಕೆ ಕಳುಹಿಸಲಾಗುವುದು.

0 * * * * * * * 0